KATK010047762023

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಇವರ ನ್ಯಾಯಾಲಯದಲ್ಲಿ</u>**

**ಸತ್ರ ಮೊಕದ್ದಮೆ ಸಂಖ್ಯೆ ಃ106/2023**

ಫಿರ್ಯಾದಿ ಃ ರಾಜ್ಯದ ಪರವಾಗಿ ಗುಬ್ಬಿ ಪೋಲೀಸ್

ವಿರುದ್ಧ

ಆರೋಪಿತ ಃ ಕುಮಾರ

**<u>ದೋಷಾರೋಪಣೆ</u>**

**ಬಿ.ಜಯಂತ ಕುಮಾರ್, ಬಿ.ಎ.ಲಾ., ಎಲ್.ಎಲ್.ಎಮ್.** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಆದ ನಾನು ಆರೋಪಿತರಾದಃ

ಕುಮಾರ ಬಿನ್ ರಾಜಣ್ಣ, 42 ವರ್ಷ,
ಕೂಲಿ, ಬಾಬು ಜಗಜೀವನ ರಾಂ ನಗರ,
ಗುಬ್ಬಿ.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ17.07.2022 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಗುಬ್ಬಿ ಪೋಲೀಸ್ ಠಾಣಾ ವ್ಯಾಪ್ತಿಯ ಗುಬ್ಬಿ ನಗರದ ಬಾಬು ಜಗಜೀವನ ರಾಂ ನಗರದಲ್ಲಿ ಆರೋಪಿಯಾದ ನೀನು ಮತ್ತು ನಿನ್ನ ಪತ್ನಿ ಮೃತೆ ಮಾಲಾ ರವರು ವಾಸವಿದ್ದ ಗುಡಿಸಲಿನಲ್ಲಿ ನಿನ್ನ ಮಕ್ಕಳಾದ ಸಾಕ್ಷಿ-2 ದಿವ್ಯ ಮತ್ತು ಸಾಕ್ಷಿ-3 ಕಾವ್ಯ ರವರ ಸಮಕ್ಷಮ ಮೃತೆ ಮಾಲಾರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಗಲಾಟೆ ಮಾಡಿ 'ನೀನು ಎಲ್ಲಿಯಾದರೂ ಹೋಗಿ ಸಾಯಿ' ಎಂದು ಜೋರಾಗಿ ಕೂಗಾಡಿ, ಮೃತೆ ಮಾಲಾರವರನ್ನು ಒಬ್ಬರನ್ನೇ ಗುಡಿಸಲಿನಲ್ಲಿ ಬಿಟ್ಟು ಸಾಕ್ಷಿ -4 ರವರ ಬಾಬ್ತು ವಾಸದ ಮನೆಯಲ್ಲಿ ಸಾಕ್ಷಿ -2 ಮತ್ತು 3 ರವರನ್ನು ಕರೆದುಕೊಂಡು ಹೋಗಿ ಮಲಗಿದ್ದು, ರಾತ್ರಿ ಯಾವುದೋ ಸಮಯದಲ್ಲಿ ಮೃತೆ ಮಾಲಾರವರು ತನ್ನ ಗೌರವಕ್ಕೆ ಧಕ್ಕೆ ಬರುವಂತೆ ನೀನು

ಮಾತನಾಡಿ ಸಾಯುವಂತೆ ಪ್ರಚೋದನಕಾರಿ ಮಾತುಗಳನ್ನಾಡಿದ್ದರಿಂದ ಮನನೊಂದು ಡೆತ್ ನೋಟ್ ನಲ್ಲಿ 'ನನ್ನ ಗಂಡ ಬಿಡಲ್ಲ, ಬರಿ ಕೆಟ್ಟ ಕೆಟ್ಟ ಮಾತುಗಳನ್ನು ಆಡಿ, ನನ್ನ ಮನಸ್ಸು ತುಂಬಾ ನೊಂದಿದೆ, ಅದಕ್ಕೆ ನಾನು ಈ ತೀರ್ಮಾನ ತೆಗೆದುಕೊಂಡಿದ್ದೇನೆ' ಎಂದು ತನ್ನ ಸ್ವಂತ ಬರವಣಿಗೆಯಲ್ಲಿ ಬರೆದಿಟ್ಟು, ತಾನು ವಾಸವಾಗಿದ್ದ ಗುಡಿಸಲಿನ ಮಧ್ಯ ಭಾಗದ ಮೇಲ್ಭಾಗದ ಕಬ್ಬಿಣದ ಪೈಪಿಗೆ ತಾನೇ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಆಕೆಯ ಆತ್ಮಹತ್ಯೆ ಮಾಡಿಕೊಳ್ಳಲು ನೀನು ಪ್ರಚೋದನೆ ಮಾಡಿ, ಭಾರತೀಯ ದಂಡ ಸಂಹಿತೆ ಕಲಂ.306 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕ 10.04.2024 ರಂದು ಆದೇಶಿಸಿದ್ದೇನೆ.

(ಬಿ.ಜಯಂತ ಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ತುಮಕೂರು</u>**

**<u>ಸತ್ರ ಮೊಕದ್ದಮೆ ಸಂಖ್ಯೆ: 106/2023</u>**

**ಫಿರ್ಯಾದಿ** : ರಾಜ್ಯದ ಪರವಾಗಿ ಗುಬ್ಬಿ ಪೊಲೀಸ್.

**ವಿರುದ್ಧ**

**ಆರೋಪಿತ** : ಕುಮಾರ ಬಿನ್ ರಾಜಣ್ಣ, 42 ವರ್ಷ,
ಕೂಲಿ, ಬಾಬು ಜಗಜೀವನ ರಾಂ ನಗರ, ಗುಬ್ಬಿ.

**ಆರೋಪಿಯ ಹೇಳಿಕೆ**

1. ಈಗ ನಿಮಗೆ ಓದಿ ವಿವರಿಸಿ ಹೇಳಿದ ಆಪಾದನೆಗಳ ವಿವರಗಳು ತಿಳಿಯಿತಲ್ಲವೇ?

ಉತ್ತರಃ

2. ಸದರಿ ಆಪಾದನೆಗಳಿಗೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬಯಸುವಿರೋ?

ಉತ್ತರಃ

(ಸದರಿ ಆರೋಪಿಗೆ ಅವರ ವಿರುದ್ಧ ಆಪಾದನೆಗಳು ಅವರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದೇನೆ. ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ.)

ದಿನಾಂಕಃ **10.04.2024**

**(ಬಿ. ಜಯಂತ ಕುಮಾರ್)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.